# ಶ್ರೀಮಾತೆಯವರೊಡನೆ ಮಾತುಕತೆ



### ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

**ಸ್ವ**ಲ್ಪ ಸಮಯದ ನಂತರ ೪–೫ ಮಂದಿ ಮಹಿಳೆಯರು ಬಂದರು. ಎಳನೀರು ಮತ್ತು ಸ್ವಲ್ಪ ಹಣ್ಣನ್ನು ಶ್ರೀಮಾತೆಯವರ ಕಾಲಿನ ಬಳಿ ಇಟ್ಟು ನಮಸ್ಕರಿಸಿದರು. ಅವರಲ್ಲಿ ಒಬ್ಬಾಕೆ ಶ್ರೀಮಾತೆಯವರ ಕಾಲನ್ನು ಮುಟ್ಟಲು ಮುಂದಾದಳು. ಶ್ರೀಮಾತೆ "ಅಲ್ಲಿಂದಲೇ ಮಾಡು" ಎಂದರು. ಶ್ರೀಮಾತೆ ಎಷ್ಟು ಬೇಡವೆಂದರೂ ಆ ಮಹಿಳೆಯರು ಪಾದದ ಬಳಿ ಸ್ವಲ್ಪ ಹಣ ಇಟ್ಟು ನಮಸ್ಕರಿಸಿದರು. ಅವರು ಶ್ರೀಮಾತೆಗೆ ಸ್ವಲ್ಪ ಉಪದೇಶ ಕೊಡುವಂತೆ ಕೇಳಿದರು. ಶ್ರೀಮಾತೆಯವರು ನಗುತ್ತಾ, "ನಾನೇನು ತಾನೆ . ಹೇಳಲಿ? ಶ್ರೀರಾಮಕೃಷ್ಣರ ಉಪದೇಶಗಳು ಪುಸ್ತಕ ರೂಪದಲ್ಲಿ ಬಂದಿವೆ. ಅವುಗಳನ್ನು ಓದಿ, ಒಂದೊ ಎರಡೊ ಪಾಲಿಸಿದರೆ ಅದೇ ಬೇಕಾದಷ್ಟಾಯಿತು" ಎಂದು ಹೇಳಿದರು. ಕೆಲವು ಕುಶಲ ಪ್ರಶ್ನೆಗಳನ್ನು ಕೇಳಿದರು. ಆ ಮಹಿಳೆಯರು ನಮಸ್ಕರಿಸಿ ಹೊರಟರು. ನಂತರ ಶ್ರೀಮಾತೆ ನನಗೆ ಹೇಳಿದರು: "ಉಪದೇಶವಂತೆ, ಉಪದೇಶ. ಅದನ್ನು ಗ್ರಹಿಸುವ ಶಕ್ತಿ ಎಲ್ಲಿದೆ? ಧಾರಣಾಶಕ್ತಿ ಬೇಕಮ್ಮಾ, ಧಾರಣಾಶಕ್ತಿ ಬೇಕು. ಇಲ್ಲದಿದ್ದರೆ ಏನೂ ಆಗುವುದಿಲ್ಲ." ಮಾತಿನ ಮಧ್ಯೆ ಹೃದಯರಾಮನ (ಶ್ರೀರಾಮಕೃಷ್ಣರ ಸೋದರಳಿಯ) ಮಾತು ಬಂತು.

ಅಷ್ಟರಲ್ಲಿ ಅನ್ನಪೂರ್ಣಳ ತಾಯಿ ಒಳಗೆ ಬಂದಳು. ಎಲ್ಲಾ ಅಲ್ಲಿಗೇ ನಿಂತಿತು. ಆಕೆಗೆ ಶ್ರೀರಾಮಕೃಷ್ಣರು ಯಾರ ಎಂಜಲನ್ನೂ ತಿನ್ನಬಾರದೆಂದು ಹೇಳಿದ್ದಾರೆ. ಆದರೆ ಅವಳು ಶ್ರೀಮಾತೆಗೆ, "ಅಮ್ಮಾ, ನನ್ನ ಸ್ವಪ್ನದಲ್ಲಿ ನೀವು ಬಂದು 'ನನ್ನ ಪ್ರಸಾದವನ್ನು ತಿನ್ನು. ಹಾಗಾದರೆ ಮಾತ್ರ ನಿನ್ನ ರೋಗ ದೂರವಾಗುತ್ತದೆ' ಎಂದು ಹೇಳಿದಿರಿ. ಆದ್ದರಿಂದ ಅಮ್ಮಾ, ನಿಮ್ಮ ಪ್ರಸಾದ ಸ್ವಲ್ಪ ಕೊಡಿ" ಎಂದಳು. ಶ್ರೀಮಾತೆ ಒಪ್ಪದೇ ಇರಲು ಆಕೆ ಬಹಳ ಕಾಡಲಾರಂಭಿಸಿದಳು.

"ಶ್ರೀರಾಮಕೃಷ್ಣರು ಯಾವುದನ್ನು ಬೇಡ ಅಂದರೋ ಅದನ್ನೇ ಮಾಡಲು ಹೊರಟಿರುವೆಯಲ್ಲಾ?" ಎಂದರು ಶ್ರೀಮಾತೆ. ಅದಕ್ಕೆ ಅನ್ನಪೂರ್ಣಳ ತಾಯಿ, "ಇಷ್ಟು ದಿನ ನಿಮ್ಮಿಬ್ಬರನ್ನು ಬೇರೆಬೇರೆಯಾಗಿ ನೋಡುತ್ತಿದ್ದೆ. ಆಗ ಆ ಮಾತು ಸರಿ. ಆದರೆ ಈಗ ಕೊಡಿ" ಎಂದು ಉತ್ತರ ಕೊಟ್ಟಳು (ಈಗ ವ್ಯತ್ಯಾಸ ನೋಡುತ್ತಿಲ್ಲ, ನೀವಿಬ್ಬರೂ ಒಂದೇ ಎಂದರ್ಥ). ಕೊನೆಗೂ ಶ್ರೀಮಾತೆ ಪ್ರಸಾದ ಕೊಟ್ಟರು.

ಒಬ್ಬೊಬ್ಬರಾಗಿ ಎಲ್ಲರೂ ಹೊರಟರು. ನಾನು ಗೌರೀ ಮಾ ಆಶ್ರಮಕ್ಕೆ ಹೋಗಿ ಮನೆಗೆ ಹಿಂದಿರುಗಬೇಕು. ಆದ್ದರಿಂದ ನಾನೂ ನಮಸ್ಕರಿಸಿ, ಶ್ರೀಮಾತೆಯವರಿಂದ ಬೀಳ್ಕೊಂಡೆ.

ಇಂದು ಶ್ರೀ ಶೋಕಹರಣರ ಜೊತೆ ಹೋಗಿದ್ದೆ. ಬೆಳಿಗ್ಗೆಯ ಪೂಜೆ ಮುಗಿದಿದೆ. ನನ್ನನ್ನು ನೋಡಿ, "ಬಂದೆಯಾ ಅಮ್ಮಾ, ಒಳ್ಳೆಯದು ಮಾಡಿದೆ" ಎಂದರು. ಅನಂತರ, "ಜಯರಾಂಬಾಟಿಗೆ ಹೊರಡುವ ದಿನವು ಬದಲಾಯಿತು. ಈಗ ೧೧ ಅಥವಾ ೧೩ ರಂದು ಹೋಗುತ್ತೇನೆ. ಸರಿ, ಯಾರ ಜೊತೆಗೆ ಬಂದೆ?" ಎಂದು ಕೇಳಿದರು. ನಾನು, "ಶೋಕಹರಣ ಕರೆತಂದರು. ಬಹಳ ದೂರ ಇರುವುದರಿಂದ ಮತ್ತೆ ಮತ್ತೆ ಬರಲು ಆಗುವುದಿಲ್ಲ" ಎಂದೆ. ಶೋಕಹರಣರ ಪ್ರಶಂಸೆ ಮಾಡುತ್ತ ಶ್ರೀಮಾತೆ ಹೇಳಿದರು, "ಆಹಾ! ಎಷ್ಟು ಒಳ್ಳೆಯ ಹುಡುಗ. ನಿನ್ನ ಪತಿ ಹೇಗಿದ್ದಾನೆ? (ಶ್ರೀಮಾತೆ ಇಲ್ಲಿ "ಅಳಿಯ ಹೇಗಿದ್ದಾನೆ?" ಎಂದು ಕೇಳಿದರು). ನಾನು 'ಪರವಾಗಿಲ್ಲ ಅಮ್ಮಾ' ಎಂದೆ. ಸ್ವಲ್ಪ ಸಮಯದ ನಂತರ ಒಂದು ಪತ್ರಕ್ಕೆ ಉತ್ತರ ಬರೆಯುವಂತೆ ಹೇಳಿದರು. ಶ್ರೀಮಾತೆ ಹೇಳುತ್ತಿದ್ದಂತೆ ನಾನು ಬರೆದೆ.

ಮಧ್ಯಾಹ್ನ ಊಟದ ನಂತರ ಶ್ರೀಮಾತೆ ವಿಶ್ರಮಿಸುತ್ತಿದ್ದಾರೆ. ಅಷ್ಟರಲ್ಲಿ ಕೆಲವು ಮಹಿಳೆಯರು ದರ್ಶನಕ್ಕಾಗಿ ಬಂದರು. ಮಲಗಿದ್ದ ಜಾಗದಿಂದಲೇ ಶ್ರೀಮಾತೆ ಅವರ ಕುಶಲದ ಬಗ್ಗೆ ಪ್ರಶ್ನಿಸಿದರು. ಒಬ್ಬಳು, "ನನ್ನ ಬಳಿ ಒಳ್ಳೆ ಮೇಕೆ ಇದೆ. ಸುಮಾರು ಎರಡು ಸೇರು ಹಾಲು ಕೊಡುತ್ತದೆ. ಜೊತೆಗೆ ಮೂರು ಕೋಳಿಗಳಿವೆ. ಇದೇ ನನಗೆ ಅವಲಂಬನೆ. ವಯಸ್ಸೇನು ಕಡಿಮೆಯೇ?" ಎಂದಳು. ಶ್ರೀಮಾತೆ ನಿರ್ವಿಕಾರವಾಗಿ, "ಹಾ, ಹಾ" ಎನ್ನುತ್ತಿದ್ದರು.

ನನ್ನ ಮನಸ್ಸಿಗೆ ಠಾಕೂರರ ಉಪದೇಶ ವಾಕ್ಯ ನೆನಪಿಗೆ ಬಂತು. ಅವರು ಒಂದು ಕಡೆ ಹೇಳುತ್ತಾರೆ, "ಮಹಾಮಾಯೆ ಎಷ್ಟು ಬಲಶಾಲಿ ಎಂದರೆ, ಒಂದು ಬೆಕ್ಕನ್ನು ಸಾಕಿಯೇ ದೇವರನ್ನು ಮರೆಯುವಂತೆ ಮಾಡುತ್ತಾಳೆ. ಏನಾಶ್ಚರ್ಯ?!"

(*ಮುಂದುವರಿಯುವುದು*)